ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಆರ್ಕಲ್ ಇನ್ಸ್‌ಪೆಕ್ಟರ್ ನಿಂಗಪ್ಪನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ಚರ್ಚೆ ಆಗತ್ಕವಿಲ್ಲ. ತಾವು ಬರೆದು ಕೊಟ್ಟಿದ್ದೀರಿ. ವಿಚಾರ ಮಾಡಿ ಉತ್ತರ ಕಳಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಜ್ಯುಡಿಷಿಯಲ್ ಎನ್‌ಕ್ವೈರಿ ಕೊಡಿ ಅವರನ್ನು ಸಸ್ಪೆಂಡ್ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಿಂದಿನ ಸಂಕಾರದವರು ಮಾತು ಮಾತಿಗೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಎಷ್ಟೋ ಎನ್‌ಕ್ವೈರಿಗಳು ಸ್ಟಾರ್ಟ್ ಆಗಿಯೇ ಇಲ್ಲ. ಬರೀ ಪೇಪರಿನಲ್ಲಿ ಮಾತ್ರ ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಇದೆ. ಈ ರೀತಿ ಪ್ರತಿಯೊಂದಕ್ಕೂ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಕೇಳುವುದರಲ್ಲೂ ಅರ್ಥವಿಲ್ಲ. ನೋಡೋಣ, ಅಂತಹ ಅವಶ್ಯ ಬಂದರೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೇ ಹೊರತಾಗಿ ಇಲ್ಲದೇ ಹೋದರೆ ಅನಾವಶ್ಯಕವಾಗಿ ಎಲ್ಲಕ್ಕೂ ಮಾಡುವುದು ಸರಿಯಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಅಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಅಂಥಾದ್ದರಲ್ಲಿ ಸಸ್ಪೆಂಡ್ ಮಾಡುವುದಿಲ್ಲ ಅಂದರೆ ಹೇಗೆ ?

ಶ್ರೀ ವೀರೇಂದ್ರ ಪಾಟೀಲ್.—ಒಬ್ಬರು ಸಸ್ಪೆಂಡ್ ಮಾಡಿ ಎಂದು ಹೇಳುತ್ತಾರೆ, ಒಬ್ಬರ್ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದಾರೆ. ಇದು ಬಹುಶಃ ಅವರೇ ಮೈಂಡ್ ಮೇಕಪ್ ಮಾಡಿಕೊಂಡ ಹಾಗೆ ಕಾಣುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ —ಅವರನ್ನು ಅಮಾನತಿನಲ್ಲಿಟ್ಟು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದೇನೆ. ಎರಡೆರಡು ಹೇಳುತ್ತಾ ಇಲ್ಲ, ಒಂದೇ ಹೇಳುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಪ್ರತಿಯೊಂದಕ್ಕೂ ಜುಡಿಷಿಯಲ್ ಎನ್‌ಕ್ವೈರಿ ಕೇಳಲೂ ಬಾರದು ಮಾಡಲೂ ಬಾರದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸಂಬಂಧಪಟ್ಟವರನ್ನು ಸಸ್ಪೆಂಡಿನಲ್ಲಿಟ್ಟು ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದೇನೆ. ಅವರನ್ನು ಅಮಾನತ್ತಿನಲ್ಲಿಡುತ್ತೀರಾ ಎಂದು ಕೇಳುತ್ತಿದ್ದೇನೆ.

ಬೆಳಗಾವಿ ನಗರ ಸಭೆ ಚುನಾವಣೆಯನ್ನು ಮುಂದೂಡುವುದು:

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಈ ಸದನ ಇವತ್ತು ಮುಕ್ತಾಯವಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಸದನವನ್ನು ಇವತ್ತೇ ಮುಕ್ತಾಯ ಮಾಡುತ್ತೀರಾ ಅಥವಾ ಇನ್ನೊಂದು ದಿವಸ ಸದನವನ್ನು ಮುಂದುವರಿಸುತ್ತೀರೊ ಗೊತ್ತಿಲ್ಲ. ಒಂದು ವೇಳೆ ಮುಂದುವರಿಸಿದರೆ ಸಂತೋಷ. ಈ ಸಂದರ್ಭದಲ್ಲಿ ಒಂದು ಪ್ರಮುಖವಾದಂತಹ ವಿಚಾರವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಬೆಳಗಾವಿ ನಗರ ಸಭೆಯ ಬಗ್ಗೆ ಹೇಳುತ್ತೇನೆ. ಅಲ್ಲಿ ವಿಭಾಗಗಳು ಬಹಳ ಮೋಸದಿಂದ ಕೂಡಿದೆ. ಮರಾಠಿ ಮತದಾರರಿಗೆ ಅನುಕೂಲವಾಗಿರತಕ್ಕಂತಹ ರೀತಿಯಲ್ಲಿ ವಿಭಾಗಗಳು ರಚನೆಯಾಗಿದೆ. ಈಗ ಅಲ್ಲಿಂದ ಜನ ಬಂದಿದ್ದಾರೆ. ಅಲ್ಲಿ ಚುನಾವಣೆ ಬಹಳ ಅಕ್ರಮವಾಗಿ ನಡೆಯುತ್ತದೆ. ಅಲ್ಲಿ ಮರಾಠಿ ಪರವಾಗಿ ಆಗುತ್ತಿದೆ. ಎನ್ನತಕ್ಕಂಥ ಪ್ರಶ್ನೆ ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತಕ್ಷಣ ಅಲ್ಲಿಂದ ವರದಿ ತರಿಸಿಕೊಂಡು ಅಲ್ಲಿ ಅನ್ಯಾಯವಾಗಿದ್ದರೆ ಅಲ್ಲಿನ ಚುನಾವಣೆಯನ್ನು ಮುಂದೂಡುವ ಬಗ್ಗೆ ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಡಬೇಕು. ಈಗಾಗಲೇ ಮಹಾರಾಷ್ಟ್ರ ಮುಖ್ಯ ಮಂತ್ರಿಗಳು ಜನಾಭಿಪ್ರಾಯದ ಬಗ್ಗೆ ದೊಡ್ಡ ಒಂದು ಗೊಂದಲವನ್ನು ಎಬ್ಬಿಸುತ್ತಿದ್ದಾರೆ. ಅವರು ದೆಹಲಿಗೆ ನಿಯೋಗ ಹೋಗಿದ್ದಾರೆ. ಇದರ ಬಗ್ಗೆ ನಿಮ್ಮ ಸರಕಾರದ ನಿಲುವು ಏನು ಎಂಬುದನ್ನು ತಿಳಿಸಬೇಕು. ಪತ್ರಿಕೆಯಲ್ಲಿ ಬಂದಿದೆ. ಈ ಸಭೆಯಲ್ಲಿ ಸರಕಾರದ ನಿಲುವು ಈ ಬಗ್ಗೆ ಏನು ಎಂಬುದನ್ನು ಹೇಳಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನೂ ಕೂಡ ನಿಯಮ ೩೫ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಬೆಳಗಾವಿ ವಿಭಾಗದಲ್ಲಿ ಒಂದೊಂದು ವಾರ್ಡ್‌ನಲ್ಲಿ ೮೯೪೦, ೭೯೭೫, ೮೮೯೫, ೬೦೦೦, ೬೦೦೯ ಹೀಗೆ ಮತದಾರರ ಪಟ್ಟಿಯನ್ನು ಮಾಡಿದ್ದಾರೆ. ಆದರೆ ಇನ್ನು ಕೆಲವು ವಾರ್ಡ್‌ಗಳಲ್ಲಿ ೨೭೦೦

೨೮೦೦ ಎಂದು ಇದೆ. ಈ ವ್ಯತ್ಯಾಸ ಒಂದು ಕಡೆ ಆಗಿದೆ. ೧೯೭೧ರ ಸೆನ್ಸಸ್ ಪ್ರಕಾರ ಈ ಲಿಸ್ಟ್ ಅನ್ನು ಮಾಡಿದ್ದಾರೆ. ಮೇಲಾಗಿ ಹರಿಜನರಿಗಾಗಿ ಮೀಸಲಿಟ್ಟಿರತಕ್ಕ ಜಾಗ ಬಹಳ ಕಡಿಮೆ. ಕೇವಲ ೩ ಸ್ಥಾನ ಮಾತ್ರ ಇದೆ. ಇಲ್ಲಿ ದೋಷ ಇದೆ. ಮಹಿಳೆಯರಿಗೆ ಮೀಸಲು ಇಟ್ಟಿರುವುದೂ ಕೂಡ ಅಷ್ಟೇ ಕಡಿಮೆ. ಎಲ್ಲಿ ಮಹಿಳೆಯರು ಕಡಿಮೆ ಇದ್ದಾರೆ ಅಲ್ಲಿ ಮೀಸಲು ಕೊಟ್ಟಿದ್ದಾರೆ. ಹೊಸದಾಗಿ ಅಡಿಷನಲ್ ಲಿಸ್ಟ್ ಮಾಡಿಲ್ಲ. ಈ ರೀತಿ ಸೊಂದಲಗಳಿವೆ. ಈಗಿರತಕ್ಕ ರೀತಿಯಲ್ಲೇ ಚುನಾವಣೆಯನ್ನು ಮಾಡುವುದಕ್ಕೆ ಹೋದರೆ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಚುನಾವಣೆಯನ್ನು ಮುಂದೂಡಿ ಇವೆಲ್ಲವನ್ನೂ ಸರಿಪಡಿಸಿ ಚುನಾವಣೆಯನ್ನು ಮಾಡುವುದು ಸಮಂಜಸ ನ್ನುವುದು ನನ್ನ ಸಲಹೆ. ಅದನ್ನು ತಾವು ಆಲೋಚನೆ ಮಾಡಿ.

ಶ್ರೀ ಎಸ್.ಹೆಚ್. ಕೌಜಲಗಿ.—ಮಾನ್ಯ ಸಭಾಧ್ಯಕ್ಷರೆ, ಒಂದು ವಾರ್ಡ್‌ನಲ್ಲಿ ೮೦೫೯, ಇನ್ನೊಂದು ವಾರ್ಡ್‌ನಲ್ಲಿ ೭೬೫೦ ಮತ್ತೊಂದು ವಾರ್ಡ್‌ನಲ್ಲಿ ೬೫೨೦ ಜನಸಂಖ್ಯೆ ಇದ್ದರೆ ಮತ್ತೆ ಕೆಲವು ಕಡೆ ೨೭೫೦, ೨೧೫೦ ಈ ರೀತಿ ಜನಸಂಖ್ಯೆ ಇದೆ. ಇಂಥ ಕಡೆ ಅಂದರೆ ಕಡಿಮೆ ಜನಸಂಖ್ಯೆ ಇರುವ ವಾರ್ಡ್‌ಗಳಲ್ಲಿ ಮರಾಠಿಯವರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಇದನ್ನೂ ಗಮನಿಸಿ ಕ್ಷೇತ್ರ ಪುನರ್ ವಿಂಗಡಣೆ ಮಾಡಿದನಂತರವೇ ಮುನಿಸಿಪಾಲಿಟಿ ಮತ್ತು ನಗರಸಭೆ, ಪುರಸಭೆಗಳಿಗೆ ಚುನಾವಣೆಯನ್ನು ನಡೆಸ ಬೇಕೆಂದು ನಾವು ಕೇಳಿದ್ದೆವು. ಆಗ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲಿಸುತ್ತೇವೆಂದು ಹೇಳಿದ್ದರು. ಆದರೆ ಈಗ ಚುನಾವಣೆಯ ತಾರೀಖಿನ್ನು ಘೋಷಣೆ ಮಾಡಿದ್ದೀರಿ. ಇದರಿಂದ ಮುಂದೆ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ತಾವು ಈ ಚುನಾವಣೆಯನ್ನು ನಡೆಸುವುದಕ್ಕೆ ಸ್ಟೇ ಕೊಡಬೇಕು. ಕೂಡಲೆ ಪುನರ್ವಿಂಗಡಣೆ ಮಾಡಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗಾಗಲೇ ಎಲ್ಲಾ ಮುನಿಸಿಪಾಲಿಟಿಗಳಿಗೂ, ನಗರಸಭೆಗಳಿಗೂ ಫೆಬ್ರವರಿ ೫ನೇ ತಾರೀಖು ಚುನಾವಣೆಯನ್ನು ನಡೆಸಬೇಕೆಂದು ಕ್ಯಾಬಿನೆಟ್ ನಿರ್ಣಯ ಮಾಡಿದೆ. ಕ್ಯಾಲೆಂಡರ್ ಆಫ್ ಈವೆಂಟ್ಸ್‌ನ್ನು ನಾಳೆ ಅಥವ ನಾಡಿದ್ದರಲ್ಲಿ ಪ್ರಕಟಿಸುತ್ತೇವೆ. ಈಗ ಈ ಸದನದಲ್ಲಿ ತಂದಿರತಕ್ಕ ಪ್ರಶ್ನೆ ಬಹಳ ಸೀಮಿತವಾಗಿದೆ. ಇದು ಬೆಳಗಾಂ ಕಾರ್ಪೊರೇಷನ್‌ಗೆ ಮಾತ್ರ ಸೀಮಿತ ವಾಗಿರತಕ್ಕದ್ದಾಗಿದೆ. ತಮಗೇ ಗೊತ್ತಿರುವಂತೆ, ಎಲ್ಲ ಮುನಿಸಿಪಾಲಿಟಿಗಳಿಗೂ ೧೯೭೧ರ ಜನಗಣತಿ ಆಧಾರದ ಮೇಲೆ ಈಗ ಚುನಾಣೆಯನ್ನು ಮಾಡುತ್ತಿದ್ದೇವೆ. ಆಡಳಿತಾಧಿಕಾರಿಗಳ ಅಧಿಕಾರಾವಧಿ ಮುಗಿಯುವುದಕ್ಕೆ ಮುಂಚೆ ಚುನಾವಣಾ ಸಿದ್ಧತೆ, ಡೀ ಲಿಮಿಟೇಷನ್, ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕಿತ್ತು. ಬಹುಶಃ ಅದನ್ನು ಸರ್ಕಾರ ಮಾಡಲಿಲ್ಲ. ಹಿಂದಿನ ಸರ್ಕಾರ ಏಕೆ ಮಾಡಲಿಲ್ಲ ಎನ್ನುವ ವಿವಾದಕ್ಕೆ ನಾನು ಹೋಗುವುದಿಲ್ಲ. ಹಾಗೆ ಮುಂಚೆ ಮಾಡಿದ್ದರೆ, ಆವರ ಟರ್ಮ್ ಮುಗಿದ ಕೂಡಲೆ ಚುನಾವಣೆ ನಡೆಸಲಿಕ್ಕಾಗುತ್ತದೆ ಜನರ ಪ್ರತಿನಿಧಿಗಳ ಕೈಗೆ ನಗರಸಭೆ, ಪುರಸಭೆಗಳ ಅಧಿಕಾರವನ್ನು ಕೊಡಬೇಕು ಬಹಳ ಸಮಯ ಆಡಳಿತಾಧಿಕಾರಿಗಳಿಂದ ಅಧಿಕಾರ ನಡೆಸಲಾರದೂ ಎನ್ನುವುದೂ ನಮ್ಮ ಸರ್ಕಾರದ ಸಿದ್ಧಾಂತವಾಗಿದೆ. ಆದ್ದರಿಂದ ನಾವು ತಕ್ಷಣ ಚುನಾವಣೆಯನ್ನು ಮಾಡಬೇಕೆಂದು ಸಂಬಂಧಪಟ್ಟ ಎಲ್ಲ ವಿಧಿ ವಿಧಾನಗಳನ್ನೆಲ್ಲಾ ಮುಗಿಸಿದ್ದೇವೆ. ಆದರೆ ಈಗ ಮಾನ್ಯ ಸದಸ್ಯರು ಕೇವಲ ಬೆಳಗಾಂ ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂತೆ ಮಾತ್ರ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಎಲ್ಲಾ ನಗರಸಭೆಗಳ ವಿಚಾರವೇ ಬೇರೆ. ಬೆಳಗಾಂ ನಗರಸಭೆಯ ವಿಚಾರವೇ ಬೇರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—೨೧ರ ಸೆನ್ಸಸ್ ಪ್ರಕಾರ ಕ್ಷೇತ್ರ ಪುನರ್ವಿಂಗಡಣೆ ಮಾಡ ಬೇಕೆಂಬ ಬೇಡಿಕೆ ಕೂಡ ಇದೆ. ಕ್ಷೇತ್ರ ಪುನರ್ವಿಂಗಡಣೆ ಮಾಡಬೇಕಾದರೆ ಇನ್ನೂ ಒಂದು ವರ್ಷ ಕಾಲ ಚುನಾವಣೆಯನ್ನು ಮುಂದಕ್ಕೆ ಹಾಕಬೇಕಾಗುತ್ತದೆ. ಅದುವರೆಗೆ ಆಡಳಿತಾಧಿಕಾರಿಗಳೇ ಅಧಿಕಾರವನ್ನು ನಡೆಸಬೇಕಾಗುತ್ತದೆ. ಆಗ ಆಡಳಿತಾಧಿಕಾರಿಗಳಿಂದ ಆಡಳಿತವನ್ನು ನಡೆಸಬೇಕೆ ? ಅಥವಾ ಜನರ ಪ್ರತಿನಿಧಿಗಳ ಕೈಗೆ ಅಧಿಕಾರವನ್ನು ಕೊಡಬೇಕೆ ? ಎಂಬ ಪ್ರಶ್ನೆ ಬರುತ್ತದೆ. ನಮ್ಮ ಉದ್ದೇಶ, ನಮ್ಮ ಸರ್ಕಾರದ ನೀತಿ ಏನೆಂದರೆ, ಜನರ ಪ್ರತಿನಿಧಿಗಳ ಕೈಗೆ ತಕ್ಷಣ ಅಧಿಕಾರವನ್ನು ಕೊಡತಕ್ಕಂಥಾದ್ದು, ಪ್ರಜಾ ಪ್ರಭುತ್ವದ ವಿಧಾನಗಳ ಪ್ರಕಾರ ಯೋಗ್ಯವಾಗಿರುತ್ತದೆ ಎಂದು ನಮ್ಮ ಸರ್ಕಾರ ಆಲೋಚನೆ ಮಾಡಿದೆ.

ಈಗ ಬೆಳಗಾಮ್ ನಗರ ಕಾರ್ಪೊರೇಷನ್ ಬಗ್ಗೆ ತಾವು ಏನು ಹೇಳಿದ್ದೀರಿ, ವಿಭಾಗ ಅಥವಾ ವಾರ್ಡ್–ವಾರ್ಡ್‌ಗಳ ಬಗ್ಗೆ, ಜನಸಂಖ್ಯೆಯ ಬಗ್ಗೆ ವ್ಯತ್ಯಾಸ ತಾರತಮ್ಯ ಎಲ್ಲಾ ಕಾರ್ಪೊರೇಷನ್‌ಗಳಲ್ಲೂ ಇದೆ, ಬೆಂಗಳೂರಿನಲ್ಲೂ ಇದೆ. ಬೇರೆ ಬೇರೆ ಕಾರ್ಪೊರೇಷನ್‌ಗಳು ಮತ್ತು ಮುನಿಸಿಪಾಲಿಟಿಗಳಲ್ಲೂ ಇದೆ. ನಾವು ಬೆಳಗಾಮ್ ನಗರ ಕಾರ್ಪೊರೇಷನ್ ಚುನಾವಣೆಯನ್ನು ಮಾತ್ರ

ಪ್ರತ್ಯೇಕಿಸಿ ಅದನ್ನು ಮುಂದುವರಿಸಿದರೆ ಕಾನೂನು ಪ್ರಕಾರ ತಾರತಮ್ಯವಾಗುತ್ತದೆ. ಏತಕ್ಕೆಂದರೆ, ಮುರಾರಿಗರಿಗೆ ಪ್ರಯೋಜನವಾಗುತ್ತದೆ, ಲಾಭ ಸಿಗುತ್ತದೆ ಮತ್ತು ಈ ಒಂದು ಭಾಷಾ ಕಾರಣದಿಂದ ಅಥವಾ ಇನ್ನು ಯಾವುದೇ ಕಾರಣದಿಂದ ಚುನಾವಣೆಗಳನ್ನು ಮುಂದುವರಿಸಲಿಕ್ಕೆ ಕಷ್ಟವಾಗುತ್ತದೆ. ಬಹುಶ: ತಮ್ಮ ಆಶಯಕ್ಕೆ ಸ್ಪಂದಿಸಿ ಚುನಾವಣೆಗಳನ್ನು ನಾವು ಮುಂದುವರಿಸಿದರೆ ಬಹುಶ: ನಾವು ಈ ಕಟ್ಟಡದಲ್ಲಿ ಚುನಾವಣೆಯನ್ನು ಮುಂದುವರಿಸಬಹುದು. ಆದರೆ ಕೆಂಪು ಕಟ್ಟಡದಲ್ಲಿ ಅವರು ಚುನಾವಣೆ ನಡೆಸಿ ಎಂದು ಆದೇಶವನ್ನು ಕೊಡುತ್ತಾರೆ, ಆ ಒಂದು ಸಂದಿಗ್ಧ ಪರಿಸ್ಥಿತಿಗೆ ಹೋಗದೆ ಸರ್ಕಾರ ಎಲ್ಲರಿಗೂ ಕೂಡ ಸರಿಸಮಾನವಾದಂಥ ವರ್ತನೆ ಮಾಡಬೇಕಾಗಿದೆ. ಬಹುಶ: ಅದಕ್ಕೆ ಈ ಸದನ ಒಪ್ಪುತ್ತದೆಂದು ನಾನು ತಿಳಿದುಕೊಂಡಿರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇವತ್ತು ನಿಜವಾಗಿಯೂ ಬಹಳ ಅನ್ಯಾಯವಾಗುತ್ತದೆ. ಕನ್ನಡಿಗರಿಗೆ ಬಹಳ ಅನ್ಯಾಯವಾಗತ್ತದೆ ಬೆಳಗಾವಿ ಪರಿಸ್ಥಿತಿಯೇ ಬೇರೆ, ಬೇರೆ ನಗರಗಳ ಪರಿಸ್ಥಿತಿಯೇ ಬೇರೆ. ಅವರು ಇದೇ ರೀತಿ ಹೇಳುತ್ತಿದ್ದಾರೆ. ಹಿಂದೆ ನಾನು ಆ ಕಟ್ಟಡದ ಮೇಲೆ ಹೇಳಿದ ವಿಚಾರ ತಮಗೆ ಗೊತ್ತು.

ಅಧ್ಯಕ್ಷರು.—ಧ್ವಜದ್ದು, ನಾನು ನಿಮಗೆ ಚಾನ್ಸ್ ಕೊಡುತ್ತಿದ್ದೇನೆ,

ಶ್ರೀ ವಾಟಾಳ್ ನಾಗರಾಜ್.—ಹೌದು. ಹೌದು. ಧ್ವಜದ್ದು...ತಾವು ನಮ್ಮ ಜೊತೆಯಲ್ಲಿ ಧ್ವನಿಗೂಡಿಸಿ ಹೇಳಿದ್ದೀರಿ. ಬಹಳ ಸಂತೋಷ. ಧ್ವಜ ತೆಗೆಯುವ ಬಗ್ಗೆ ಏನಾಯಿತು ?

ಅಧ್ಯಕ್ಷರು.—ಮುಂದಿನ ಅಧಿವೇಶನದಲ್ಲಿ ತಾವು ಕಾಲ್ ಅಂಟೆಂಕ್ಷನ್ ರೂಪದಲ್ಲಿ ವಿಷಯವನ್ನು ತನ್ನಿ ಆಗ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಎರಡು ಸಾರಿ ಓಟಿಗೆ ಹೋಗಿ ಎಂದರೆ ಯಾರು ಹೋಗುತ್ತಾರೆ. ಯಾವ ಪಕ್ಷದವರೂ ಹೋಗುವುದಿಲ್ಲ. ಆದ್ದರಿಂದ ಕ್ಷೇತ್ರ ವಿಂಗಡಣೆ ಮಾಡಿ ಎಲೆಕ್ಷನ್ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಅವತ್ತಿನಿಂದಲೂ ಹೇಳುತ್ತಲೇ ಬಂದಿದ್ದೇವೆ. ಅವರು ಮಾಡುವುದಾಗಿ ಹೇಳುತ್ತಲೇ ಇದ್ದರು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಯೋಚನೆ ಮಾಡಿದರೆ ಅವರು ಒಂದು ಮಹತ್ವದ ವಿಚಾರದಲ್ಲಿ ಬಹಳ ಮುಂದೆ ಬಂದಂತಾಗುತ್ತದೆ. ಇನ್ನು ೪ ದಿವಸದಲ್ಲಿ ನಾಮಕರಣ ಶುರುವಾಗುತ್ತದೆ. ಕ್ಯಾಲೆಂಡರ್ ಆಫ್ ಇವೆಂಟ್ಸ್ ನಿನ್ನೆ ತಾರೀಖು ಬರುವುದು.

ಅಧ್ಯಕ್ಷರು.—ಯೋಚನೆ ಮಾಡುವುದಕ್ಕೆ ಅವಕಾಶ ಕೊಡಿ. ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಅವರು ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ, ಅವರು ಯೋಚನೆ ಮಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ತೊಂದರೆ ಬಂದಿರುವುದು ಏನೆಂದರೆ, ಯೋಚನೆ ಮಾಡುವುದಕ್ಕೆ ಹೇಳುವವರೂ ಶ್ರೀ ವಾಟಾಳ್ ನಾಗರಾಜ್‌ರವರೇ, ಮತ್ತೆ ಯೋಚನೆ ಮಾಡದೆ ಉತ್ತರ ಕೊಡಿ ಎಂದು ಹೇಳುವವರೂ ವಾಟಾಳ್ ನಾಗರಾಜ್‌ರವರೇ.

ಶ್ರೀ ವಾಟಾಳ್ ನಾಗರಾಜ್.—ಈ ಸದನದಲ್ಲಿ ಅಲ್ಲಿ ಧ್ವಜವನ್ನು ತೆಗೆಯುವ ಬಗ್ಗೆ ಏನು ತೀರ್ಮಾನ ಕೈಗೊಂಡಿದ್ದರೂ ಅದನ್ನು ಹೇಳಿ ಎಂದರೆ ಇದನ್ನು ಹೇಳುತ್ತಾರೆ ಇದನ್ನು ಹೇಳಿ ಅಂದರೆ, ಅದನ್ನು ಹೇಳುತ್ತಾರೆ. ಈ ರೀತಿ ಇವರು ಹೇಳುತ್ತಿದ್ದಾರೆ. ಈ ಸಭೆಯಲ್ಲಿ ಸುಳ್ಳು ಎನ್ನುವ ಪದವನ್ನು ಉಪಯೋಗಿಸಬಾರದು. ಈಗ ಸಭೆಯನ್ನು ಅವರು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ತಮಗೆ ಗೊತ್ತಿದೆ. ಇದೇ ಸಭೆಯಲ್ಲಿ ಅಲ್ಲಿ ಧ್ವಜವನ್ನು ತೆಗೆಯುವ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ಕೈಗೊಳ್ಳುತ್ತದೆ ಎಂದು ಅವರೇ ಹೇಳಿದ್ದಾರೆ. ಇದುವರೆಗೂ ಏನು ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಿದ್ದೆ ಅಂದರೆ ಧ್ವಜದ ಬಗ್ಗೆ...

ಅಧ್ಯಕ್ಷರು.—ಧ್ವಜದ ಬಗ್ಗೆ ಪ್ರಸ್ತಾಪ ಮಾಡಿದ್ದಲ್ಲ. ಇಲ್ಲಿ ಮುನಿಸಿಪಾಲಿಟಿಗಳ ವಿಚಾರವಾಗಿ ಹೇಳಿದ್ದರು.

ಶ್ರೀ ಎಂ ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಸುಳ್ಳು ಎಂದು ಹೇಳಿದ್ದಾರೆ. ಯಾವುದು ಸುಳ್ಳು ಯಾವುದು ಸತ್ಯ ಎಂದು ಹೇಳಬೇಕಲ್ಲ.

ಅಧ್ಯಕ್ಷರು.—ಅವರು ಸುಳ್ಳು ಎಂದು ಹೇಳಲಿಲ್ಲ, ತಪ್ಪುದಾರಿಗೆ ಎಳೆದರು ಎಂದು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಏನಾಗಿದೆ ಎಂದರೆ, ಮೊನ್ನೆ ನಾನಂ ಹೇಳಿದ್ದು ಇಷ್ಟು. ಮುನಿಸಿಪಾಲಿಟಿಗಳಾಗಲಿ, ಸ್ಥಳೀಯ ಸಂಸ್ಥೆಗಳಾಗಲಿ ಈ ಧ್ವಜದ ವಿಚಾರದಲ್ಲಿ ಅವುಗಳ ಮೇಲೆ ಯಾವ ಧ್ವಜ ಇಡಬೇಕು, ಇಡಬಾರದು ಎನ್ನುವ ಬಗ್ಗೆ ಒಂದು ಗೈಡ್‌ಲೈನ್ಸ್ ಅವಶ್ಯಕತೆ ಇದೆ. ಇದು ಬೆಳಗಾವ್ ಕಾರ್ಪೊರೇಷನ್ನಿಗೆ ಮಾತ್ರವಲ್ಲ, ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ಯಾವ ಧ್ವಜ ಇಡಬೇಕು ಎಂಬ ಬಗ್ಗೆ ಒಂದು ಸರಿಯಾದ ರೂಪುರೇಷೆ ಅಥವಾ ಗೈಡ್‌ಲೈನ್ ಕೊಡತಕ್ಕಂಥ ಅವಶ್ಯಕತೆ ಇದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ಧ್ವಜ ತೆಗೆಯಲಿಕ್ಕೆ ನಾವು ಚಿಂತನೆ ಮಾಡುತ್ತಿದ್ದೇವೆಂದು ನಾನು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈಗ ಧ್ವಜ ತೆಗೆಯಲಿಲ್ಲಲಂವೆರೆ ಯಾರು ಎಲ್ಲಿ ಬೇಕಾದರೂ ಯಾವಧ್ವಜವನ್ನಾದರೂ ಹಾಕಿಕೊಳ್ಳಬಹುದೇ ಹೇಳಿ ? ಈಗ ಆ ಧ್ವಜ ತೆಗೆಯಲಿಲ್ಲವೆಂದ ಮೇಲೆ ನಗರಸಭೆಗಳ ಮೇಲೆ ಬೇರೆ ಪುರಸಭೆಗಳ ಮೇಲೆ ಬೇರೆ. ಜಿಲ್ಲಾ ಪರಿಷತ್‌ಗಳ ಮೇಲೆ ಬೇರೆ ನಾವು ಧ್ವಜ ಗಳನ್ನು ಹಾಕೋಣವೇ ಹೇಳಿ. ನಾವು ವಿಧಾನ ಸೌಧದ ಮೇಲೆ ಅವರವರಿಗೆ ಸಂಬಂಧಪಟ್ಟ ಧ್ವಜಗಳನ್ನು ಹಾಕಬಹುದೇ ಹೇಳಿ ?

ಅಧ್ಯಕ್ಷರು.—ಅದು ಈಗ ಅಪ್ರಸ್ತುತ. ಅದರ ಬಗ್ಗೆ ಮುಂದಿನ ಅಧಿವೇಶನದಲ್ಲಿ ತಾವು ವಿಶೇಷ ಸೂಚನೆಯಾಗಿ ಕಳುಹಿಸಿಕೊಟ್ಟರೆ ಚರ್ಚೆ ಮಾಡಬಹುದು.

೪-೧೦ ಪಿ. ಎಂ.

ಕರ್ನಾಟಕದಿಂದ ತಮಿಳುನಾಡಿಗೆ ನೀರು ಕೊಡುವ ಬಗ್ಗೆ ಪ್ರಸ್ತಾಪ

ಶ್ರೀ ಎಂ. ಎಸ್. ಆತ್ಮಾನಂದ (ಮುಂಡ್ಕೂರು).—ಮಾನ್ಯ ಅಧ್ಯಕ್ಷರೇ, ತಮಿಳ್ನಾಡು ಸರ್ಕಾರದವರು ಕಾವೇರಿ ನೀರನ್ನು ಬಿಡಬೇಕೆಂದು ಎರಡನೇ ಸಲವೂ ಕೂಡ ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಇದರಿಂದಾಗಿ ನಮ್ಮ ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ರೈತರು ಚಿಂತೆಗೆ ಒಳಗಾಗಿದ್ದಾರೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಕಬ್ಬಿನ ಫಸಲು ಇದೆ. ಅದಕ್ಕೆ ಇನ್ನೂ ಆರು ತಿಂಗಳು ನೀರು ಬೇಕಾಗುತ್ತದೆ. ಹೊಸ ನೀರು ಬಂದು ಕೆ ಆರ್, ಎಸ್. ತುಂಬಬೇಕಾದರೆ ಇನ್ನೂ ೬-೭ ತಿಂಗಳು ಆಗುತ್ತದೆ. ಕಳೆದ ಎರಡು ವರ್ಷಗಳಲ್ಲಿ ನೀರನ್ನು ಬಿಟ್ಟಿದ್ದರಿಂದ ರೈತರ ಫಸಲಿಗೆ ನಷ್ಟವಾಗಿದ್ದರಿಂದ ರೈತರೆಲ್ಲಾ ಹೋಗಿ ನದಿಗೆ ಅಡ್ಡಲಾಗಿ ನಿಂತು ನೀರು ಬಿಡಬೇಡಿ ಎಂದು ಹೇಳುವ ಪರಿಸ್ಥಿತಿ ಒದಗಿ ಬಂದಿತ್ತು. ಆದ್ದರಿಂದ ಈ ಸಂದರ್ಭದಲ್ಲಿ, ರೈತರ ಹಿತವನ್ನು ಕಾಪಾಡಲು ಸರ್ಕಾರ ಏನು ಕ್ರಮಕೈಗೊಳ್ಳುತ್ತದೆಂದು ಹೇಳಬೇಕು.

ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಅಧ್ಯಕ್ಷರೆ ಕಬಿನಿಯಿಂದ ನೀರನ್ನು ತಮಿಳ್ನಾಡಿ ಬಿಟ್ಟರೆ ಕಬಿನಿ ಅಚ್ಚುಕಟ್ಟಿನಲ್ಲಿ ಸಾವಿರಾರು ಎಕರೆ ಜಮೀನಿನಲ್ಲಿ ಬೀಸಿಗೆ ಬೆಳೆ ಬೆಳೆಯಲು ತೊಂದರೆಯಾಗುತ್ತದೆಸರ್ಕಾರ ಕಬಿನಿಯಿಂದ ತಮಿಳ್ನಾಡಿಗೆ ನೀರನ್ನು ಬಿಡುತ್ತದೆಂಬ ವದಂತಿ ಬಂದಿದೆ. ಆದು ಎಷ್ಟು ಸತ್ಯವೋ ಅಸತ್ಯವೋ ಗೊತ್ತಿಲ್ಲ. ಆದರೆ ಇದರಿಂದ ನಮ್ಮ ಭಾಗದ ಕಬಿನಿ ನಾಲಾ ಅಚ್ಚುಕಟ್ಟುದಾರರಿಗೆ ತೊಂದರೆಯಾಗುತ್ತದೆ. ಮೊದಲು ನಮ್ಮ ರೈತರ ಹಿತವನ್ನು ಕಾಪಾಡಿ ಸಾಕಾದಷ್ಟು ನೀರನ್ನು ಕೊಟ್ಟು ಆನಂತರ ತಮಿಳ್ನಾಡಿಗೆ ಉಳಿದ ನೀರನ್ನು ಕೊಡಲಿ. ನಮಗೆ ನೀರಿನ ಕೊರತೆ ಮಾಡಿ ತಮಿಳ್ನಾಡಿಗೆ ನೀರು ಕೊಟ್ಟರೆ ಬಹಳ ತೊಂದರೆಯಾಗುತ್ತದೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪೆಂಕಟೇಶ್.—ಅಧ್ಯಕ್ಷರೆ, ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಕಬಿನಿ ಜಲಾಶಯದಿಂದ ನೀರನ್ನು ಬಿಡಬಾರದು ಎಂದು ಸರ್ಕಾರಕ್ಕೆ ವರದಿ ಕೊಟ್ಟಿದ್ದಾರೆ, ಮಾನ ಲೋಕೋ ಪಯೋಗಿ ಸಚಿವರು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡಿಗೆ ನೀರ ಕೊಡಬಾರದೆಂದು ಹೇಳುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ).—ಅಧ್ಯಕ್ಷರೆ, ಈ ಹಾರಂಗಿ ಮತ್ತು ಕಾವೇರಿ ನದಿಯ ಅಡ್ಡಗಟ್ಟಿಯಲ್ಲಿ ಕೆ. ಆರ್. ನಗರ ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಬಹಮಟ್ಟಿಗೆ ಪೆಟ್ ನೀರಾವರಿಯಾಗುತ್ತಿದೆ ಈಗ ಒಂದು ಫಸಲಿಗೆ ಮಾತ್ರ ಕಾವೇರಿ ಮತ್ತು ಹಾರಂಗಿಯಿಂದ ನೀರನ್ನು ಕೊಡುತ್ತಿದ್ದಾರೆ. ನಾವು ಬೇಸಿಗೆ ಬೆಳೆಗೆ ತಿಂಗಳಿಗೊಂದು ಸಾರಿಯಾದರೂ ನೀರು ಕೊಡಿ ಎಂದು ಕೇಳಿದರೂ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವ ಪರಿಸ್ಥಿತಿಯಲ್ಲಿ ಇವತ